(4) ಮಂಗಳೂರಿನಲ್ಲಿರುವ ಸಹಾಯಕ ಶಿಶಿಕ್ಷು ಸಲಹೆಗಾರರ ಕಛೇರಿಯನ್ನು ಮೈಸೂರಿಗೆ ವರ್ಗಾಯಿಸಿರುವ ಆದೇಶ ರದ್ದು.

ಶ್ರೀ ವಿಜಯಕುಮಾರ್ ಶೆಟ್ಟಿ:- (ಸುರತ್ಕಲ್) ಈಗ ನಮಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಶಿಶಿಕ್ಷು ಸಲಹೆಗಾರರ (Assistant. Apprentice Adviser) ಕಚೇರಿಯನ್ನು ಮೈಸೂರಿಗೆ ವರ್ಗಾಯಿಸಲು (ಕಾರ್ಮಿಕ ಸಚಿವಾಲಯದ ಸರ್ಕಾರಿ ಆದೇಶ ಸಂಖ್ಯೆ:

Bangalore dated: 19-12-91) ನಿರ್ಧರಿಸಲಾಗಿದೆ. ಇದರಿಂದ ಮಂಗಳೂರಿನಲ್ಲಿರುವ ಅಪ್ರೆಂಟಿಸ್‌ಗಳಿಗೆ ವ್ಯಾಪಕ ತೊಂದರೆಯಾಗುತ್ತಿದೆ. ಬೆಳೆಯುತ್ತಿರುವ ಕೈಗಾರಿಕಾ ನಗರವಾದ ಮಂಗಳೂರಿನಲ್ಲಿ ಮೇಲ್ಕಂಡ ಕಾರ್ಯಾಲಯದ ಅವಶ್ಯಕತೆಯಿದ್ದು ಇದನ್ನು ಮೈಸೂರಿಗೆ ವರ್ಗಾಯಿಸುವ ಆದೇಶವನ್ನು ರದ್ದುಗೊಳಿಸಬೇಕೆಂದು ಮಾನ್ಯ ಕಾರ್ಮಿಕ ಸಚಿವರಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎ. ಎಸ್. ನಾಡಗೌಡ:- (ಕಾರ್ಮಿಕ ರಾಜ್ಯ ಸಚಿವರು)

ಮಾನ್ಯ ಅಧ್ಯಕ್ಷರೇ ಸ್ವಲ್ಪ ಸಮಯ ಬೇಕು. ಇನ್ನು ರಿಪ್ಲೈ ಬಂದಿಲ್ಲ.

(5) ಕನ್ನಡ ನಿಘಂಟಿನ ಸಂಪಾದಕ ಸಿಬ್ಬಂದಿಯನ್ನು ಖಾಯಂ ಮಾಡಿ ಸರ್ಕಾರಿ ನೌಕರರಿಗೆ ದೊರಕುವ ಎಲ್ಲಾ ಸೌಲಭ್ಯಗಳನ್ನು ನೀಡುವುದು.

ಶ್ರೀ ಎ. ಆನಂತಕೃಷ್ಣ:- (ಶಿವಾಜಿನಗರ) ಕನ್ನಡ ನಿಘಂಟು ರಚನೆ ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರದೊಡನೆ ಮಾಡಿಕೊಂದ ಒಪ್ಪಂದದ ಮೇರೆಗೆ ನಿಘಂಟಿನ ಸಂಪಾದಕ ಸಿಬ್ಬಂದಿಯ ಸ್ಥಾನಮಾನಗಳು ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಗೆ ಸಮಾನವಾಗಿರಬೇಕೆಂಬುದಾಗಿ ತಾ:29-05-1961 ನೇ ದಿನಾಂಕದ ಸರ್ಕಾರೀ ಆದೇಶ ಇತಿ 3-ಎಂ. ಎಲ್. ಸಿ. 59 ರಲ್ಲಿ ತಿಳಿಸಲಾಗಿದ್ದು ಕನ್ನಡ ನಿಘಂಟು ಯೋಜನೆ 1962ರಲ್ಲಿ ಪ್ರಾರಂಭವಾಯಿತು. ಈಗ ಆರು ಸಂಪುಟಗಳ ಕಾರ್ಯ ಪೂರ್ಣವಾಗಿದ್ದು ಇನ್ನೂ ಎರಡು ಸಂಪುಟಗಳು ತಯಾರಾಗಬೇಕಾಗಿದೆ.

ನಿಘಂಟಿನ ತಯಾರಿಕೆಗಾಗಿ ಸಂಪಾದಕ ಮಂಡಲಿಯೊಂದನ್ನು ರಚಿಸಲಾಗಿದ್ದು ಮೇಲ್ಕಂಡ ಸರ್ಕಾರೀ ಆದೇಶದ ಮೇರೆಗೆ ಸಂಪಾದಕ (ಕಾಲೇಜು ಪ್ರಾಧ್ಯಾಪಕರಿಗೆ ಸಮ), ಉಪಸಂಪಾದಕ (ರೀಡರ್‌ಗೆ ಸಮ) ಮತ್ತು ಸಹಾಯಕ ಸಂಪಾದಕರು (ಕಾಲೇಜು ಅಧ್ಯಾಪಕರಿಗೆ ಸಮ)ಗಳನ್ನು ಒಳಗೊಂಡಿದೆ. ಸದ್ಯ 14 ಮಂದಿ ಸಿಬ್ಬಂದಿ ವರ್ಗದವರಿದ್ದು ಒಬ್ಬರು ಯಾವ ಸವಲತ್ತುಗಳನ್ನೂ ಪಡೆಯದೇ ನಿವೃತ್ತರಾಗಿದ್ದಾರೆ. ಭವಿಷ್ಯ ನಿಧಿ, ಜೀವವಿಮೆ, ವೃತ್ತಿ ಬೇತನ, ಗ್ರಾಜುಯಿಟಿ, ರಜಾ ಸೌಲಭ್ಯಗಳು ನಿಘಂಟಿನ ಸಿಬ್ಬಂದಿ ವರ್ಗದವರಿಗೆ ದೊರಕುತ್ತಿಲ್ಲ.

ನಿಘಂಟಿನ ಕೆಲಸ ನಿರಂತರವಾಗಿ ನಡೆಯುವಂತಹ ಕೆಲಸವಾಗಿದ್ದು ಇದನ್ನು ಮುಚ್ಚುವ ಪ್ರಮೇಯವೇ ಬರುವುದಿಲ್ಲವಾದ್ದರಿಂದ ವಿವಿಧ ಅಕಾಡಮಿಗಳ ಸಿಬ್ಬಂದಿ ವರ್ಗದವರನ್ನು ಕರ್ನಾಟಕ ಗೆಜೆಟಿಯರ್ ನೌಕರ ವರ್ಗದವರನ್ನು ಇದಕ್ಕೂ ಮೀರಿ ದಿನಗೂಲಿ ನೌಕರರ ವರ್ಗದವರನ್ನು ಖಾಯಂ ಮಾಡಿರುವ ಸರ್ಕಾರ, ನಿಘಂಟಿನ ಸಿಬ್ಬಂದಿ ವರ್ಗವನ್ನು ಖಾಯಂ ಆಗಿ ಮಾಡುವ ದಿಸೆಯಲ್ಲಿ ಕ್ರಮವನ್ನು ಕೈಗೊಂಡು ಅವರಿಗೆ ಇತರೆ ಸರ್ಕಾರೀ ನೌಕರರುಗಳಿಗೆ ದೊರಕುವ ಎಲ್ಲ ಸೌಲಭ್ಯಗಳನ್ನೂ ನೀಡಬೇಕೆಂಬು ವಿನಂತಿಸುತ್ತೇನೆ.

ಶ್ರೀ ಎಸ್ ರಮೇಶ್:- (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಮಾನ್ಯ ಅಧ್ಯಕ್ಷರೇ, ಕನ್ನಡ ನಿಘಂಟು ಕಾರ್ಮಿಕರ ಸಲಹೆಗಳನ್ನು ಪರಿಶೀಲಿಸಿ ಅಂತಿಮವಾಗಿ ಹಣಕಾಸಿನ ಇಲಾಖೆಗೆ ಕಳುಹಿಸಿಸ್ದೇವೆ. ಆದಷ್ಟು ಬೇಗ ಕ್ರಮ ತೆಗೆಯಕೊಳ್ಳುತ್ತೇವೆ.

(ಉಪಾಧ್ಯಕ್ಷಣೆಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠಕ್ಕೆ ಗಂದರು)